**ದಿನಾಂಕಃ 26.06.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ನಂ.3 ರಿಂದದ 6 ರ ಪರ ಶ್ರೀ ಎಂ ಆರ್ ಪಿ ವಕೀಲರಿಂದ.**

ದಾವಾ ಹಾಕುವ ಕಾಲಕ್ಕೆ ನಿಮ್ಮ ತಂದೆ ಮೃತ್ಯುಪತ್ರ ಮಾಡಿರುವ ಬಗ್ಗೆ ನಿಮಗೆ ಗೊತ್ತಿತ್ತೊ ಅಥವಾ ಇಲ್ಲವೋ ಅಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ನನ್ನ ತಂದೆಗೆ ಮೃತ್ಯುಪತ್ರ ಬರೆಯುವ ಹಕ್ಕು ಇರಲಿಲ್ಲ. ಮೃತ್ಯುಪತ್ರ ರದ್ದತಿ ಬಗ್ಗೆ ಪರಿಹಾರ ಕೇಳಿಲ್ಲ ಅಂದರೆ ಸರಿ. ನನ್ನ ತಂದೆ ಬರೆದು ಕೊಟ್ಟಿರುವ ಕ್ರಯಪತ್ರಗಳು ಮತ್ತು ದಾನಪತ್ರಗಳು ನಮ್ಮ ಹಕ್ಕಿಗೆ ಬಂಧನಕಾರಿ ಇರುವುದಿಲ್ಲ ಅಂತ ಮಾತ್ರ ಪರಿಹಾರ ಕೇಳಿರುತ್ತೇನೆ ಅಂದರೆ ಸರಿ. ಪ್ರತಿವಾದ ಪತ್ರದಲ್ಲಿ ನಿಮ್ಮ ತಂದೆ ಮೃತ್ಯುಪತ್ರ ಮಾಡಿರುತ್ತಾರೆಂದು ಬರೆದಿದ್ದು ಅನಂತರ ನೀವು ಮೃತ್ಯುಪತ್ರದ ಬಗ್ಗೆ ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ನಿಮ್ಮ ತಂದೆ ಪ್ರತಿವಾದಿ ನಂ.1 ರಿಂದ 5 ರವರ ಹೆಸರಿಗೆ ಮೃತ್ಯುಪತ್ರ ಮಾಡಿರುತ್ತಾರೆ ಅಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ ಹಾಗೆ ಮೃತ್ಯುಪತ್ರ ಮಾಡಿರುತ್ತಾರೆ ಎನ್ನುತ್ತಾರೆ. ನಿಡಿ–4 ರ ಪ್ರಕಾರ ದಾವಾ ಬಿ ಶೆಡ್ಯೂಲ್ 1 ನೇ ಆಸ್ತಿ 1 ಮತ್ತು 2 ನೇ ಪ್ರತಿವಾದಿಗೆ ಜಂಟಿಯಾಗಿ ಸೇರತಕ್ಕದ್ದು ಎಂದು ಬರೆಯಲಾಗಿದೆ ಅಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ ಆ ರೀತಿ ಬರೆದಿರುತ್ತಾರೆ ಎನ್ನುತ್ತಾರೆ. ಮೃತ್ಯುಪತ್ರದ ಪ್ರಕಾರ ದಾವಾ ಬಿ ಶೆಡ್ಯೂಲ್ 1 ನೇ ಆಸ್ತಿ ಪ್ರತಿವಾದಿ ನಂ.1 ಮತ್ತು 2 ರ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ ಮತ್ತು ಅವರೆ ಆ ಮನೆಯಲ್ಲಿ ವಾಸ ಇರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂ.89/2 ರಲ್ಲಿ 2 ನೇ ಪ್ರತಿವಾದಿಗೆ 5 ಎಕರೆ ಜಮೀನನ್ನು ಮೃತ್ಯುಪತ್ರದ ಮೂಲಕ ಕೊಡಲಾಗಿದೆ ಅಂದರೆ ಸರಿಯಲ್ಲ. ಸರ್ವೇ ನಂ.89/1 ರಲ್ಲಿ 7 ಎಕರೆ 28 ಗುಂಟೆಯನ್ನು ಪ್ರತಿವಾದಿ ನಂ.3 ರಿಂದ 6 ರವರಿಗೆ ಸೇರತಕ್ಕದ್ದು ಎಂದು ಮೃತ್ಯುಪತ್ರದಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ. ಮೃತ್ಯುಪತ್ರದ ಪ್ರಕಾರ ಸರ್ವೇ ನಂ.89/1 ರಲ್ಲಿ 7 ಎಕರೆ 28 ಗುಂಟೆಯ ಖಾತೆ ಪ್ರತಿವಾದಿ ನಂ.3 ರಿಂದ 6 ರವರ ಹೆಸರಿಗೆ ಬದಲಾವಣೆ ಆಗಿರುತ್ತದೆ ಮತ್ತು ಆ ಜಮೀನನ್ನು ಅವರೆ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸಾಕ್ಷಿ

ಮೃತ್ಯುಪತ್ರವನ್ನು ಮೋಸದಿಂದ ಮಾಡಿಕೊಂಡು ಜಮೀನನ್ನು ಅವರೆ ಸಾಗುವಳಿ ಮಾಡುತ್ತಿದ್ದಾರೆ ಎನ್ನುತ್ತಾರೆ. ನಿಡಿ–4 ರ ಪ್ರಕಾರ ಯಾರ್–ಯಾರ ಹೆಸರಿಗೆ ಆಸ್ತಿಗಳನ್ನು ಬರೆಯಲಾಗಿದೆ ಅವರವರೆ ಆ ಆಸ್ತಿಗಳ ಸ್ವಾಧೀನಾನುಭವ ಹೊಂದಿರುತ್ತಾರೆ ಅಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ ಮೃತ್ಯುಪತ್ರ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎನ್ನುತ್ತಾರೆ.

**ಪಾಟಿ ಸವಾಲುಃ** ಪ್ರತಿವಾದಿ ನಂ.8 ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಪಾಟಿ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.